**ಭಾಮಿನಿ**
ಕಾದಿದನು ಮಯ ಹಲವು ವಿಧದಲಿ |
ಬೋದ ತಪ್ಪಿತು ಶರದ ಹತಿಯಲಿ |
ಕಾದಲಸದಳವೆಂಬುದರಿಯುತ ಮನದಿ ಚಿಂತಿಸುತ ||
ಆದಿಪುರುಷರ ನಿಜವನರಿಯದೆ |
ಹಾದಿ ತಪ್ಪಿದೆನಕಟ ಎನುತಪ |
ರಾಧ ಪರಿಹರಕಿವರ ಪಾದವೆ ಶರಣು ತನಗೆನುತ || ೧ || 54 ||

**ಕಾಪಿ - ಅಷ್ಟ**
ಕರುಣದಿ ರಕ್ಷಿಸಬೇಕು | ನಿಜ |
ವರಿಯದೆ ಗರ್ವದಿ ಕೆಣಕಿದುದು ಸಾಕು ||
ನರರೂಪ ಧರಿಸಿದ ನೀವು | ಅವ |
ತರಿಸಿದ ದಿವ್ಯಾತ್ಮರೆಂಬುದು ದಿಟವು || ೧ ||
ಸೇವೆಯ ಮಾಡುತ ನಿಮ್ಮ | ಮುಂದೆ |
ಜೀವನ ಕಳೆಯುವ ಮನವಿಹುದೆಮ್ಮ ||
ಭಾವವನರಿತೀಗಲೆನಗೆ | ಮುಂದೆ |
ಗೈವುದಕಾದೇಶವೀವುದು ಕಡೆಗೆ || ೨ || 56 ||

**ಶಂಕರಾಭರಣ - ರೂಪಕ**
ಭಯವು ಬೇಡ ಮಯನೆ ನಿನಗೆ ಅಭಯವಿತ್ತೆನು |
ನಯದ ನುಡಿಯ ಕೇಳಿ ಮನದಿ |ಹರುಷಗೊಂಡೆನು || ಪ |
ಭಯದಿ ಸೇರು ಮನಕೆ ಬಂದ ವೇಳೆಯನೀದಿನ |
ಬಯಸಿದಾಗ ಬಂದು ಕಾರ್ಯ ಗೈವುದಾದಿನ || ೧ || 57 ||

**ಕಂದ**
ಎನಲಾ ನುಡಿಗೊಪ್ಪುತ ಮಯ |
ವನಜಾಕ್ಷಿಯುಂ ತೊರೆದು ಶಾಣವನರಸಿ ಪೋಗಲ್ ||
ಅನಲನ ಕೆನ್ನಾಲಗೆಯುರಿ |
ತಾನಧಿಕವಾಗಿರೆ ತಕ್ಷಕನರಸಿ ಕಂಡುಂ || ೧ || 58 ||

**ಸಾವೇರಿ - ಆದಿ**
ಹರಹರ ಕಾಡಿನೊಳು | ಹಬ್ಬಿದ ಬೆಂಕಿ |
ಯುರುಹುತಲಿದೆಯೀಗಳು ||
ಹರಣವುಳಿವುದೆಂತು | ಮತ್ತೆನ್ನಯ |
ತರಳರ ಕಾವುದೆಂತು || ೧ ||
ನಲ್ಲನು ಪಾತಾಳಕೆ | ಪೋಗಿರುವಾಗ |
ಇಲ್ಲಿ ಸಂಕಟ ಬಂತೇಕೆ ||
ಇಲ್ಲಿಗೆ ಸಂತತಿಯು | ಬೆಂಕಿಗೆ ಬಲಿ |
ಹುಲ್ಲಿನ ತೆರನಪ್ಪುದು || ೨ ||
ಸುತ ಬಾಣದ ಕೋಟೆಯು | ಇಂಬಿಲ್ಲವು |
ಎತ್ತರ ಮುಗಿಲ ಮುಟ್ಟುವುದು ||
ಹತ್ತಲು ಜಾರುವುದು | ಜಿಗಿಯುವುದೆಂತು |
ದೈತ್ಯ ಬಲವು ಸಾಲದು || ೩ ||
ಸಣ್ಣವನಶ್ವಸೇನ | ಆತನ ನುಂಗಿ |
ತಣ್ಣನೆ ಜಿಗಿವೆ ಪ್ರಾಣ ||
ಎನಗದು ಹೋದರೇನು | ಮುಂದೆನ್ನಯ |
ಚಿಣ್ಣನು ಬದುಕುವನು || ೪ || 62 ||

**ದ್ವಿಪದಿ**
ಎನುತಲಾ ತಕ್ಷಕಿಯು ನಿಶ್ಚಯವಗೈದು |
ತನುಜನನು ನುಂಗಿದಳು ತನ್ನೊಳಗೆ ತಿಳಿದು || ೧ ||
ಆಗಸಕೆ ಜಿಗಿವುದನು ಶ್ರೀಕೃಷ್ಣ ಕಂಡು |
ಆಗಮನ ಸೂಚಿಸಲು ಪಾರ್ಥ ಬಿಲ್ಗೊಂಡು || ೨ ||
ಶರವೆಸೆಯೆ ತುಂಡಾಯ್ತು ತಕ್ಷಕಿಯ ಕೊರಳು |
ತರಳನಾ ಬಾಲವನು ಖಂಡಿಸಿತು ಸರಳು || ೩ || 65 ||

**ಭೈರವಿ - ಏಕ**
ಉರಿಯುಗುಳುತ ಹರಿತಂದ | ಹರಿ |
ನರನನು ನೋಡುತಲೆಂದ ||
ದುರುಳನೆ ಮಾತೆಯ ಕೊಂದೆ | ಎನ |
ಗುರುತರ ಸಂಕಟ ತಂದೆ || ೧ ||

